ಉತ್ತರವನ್ನು ಪಡೆದು ಸದಸ್ಯರಿಗೆ ಮತ್ತು ಸದನಕ್ಕೆ. ಕೊಡತಕ್ಕಂಥ ಪ್ರಯತ್ನವನ್ನು ನಾನು ಕಳೆದ ಎರಡೂವರೆ ಮೂರು ವರ್ಷಗಳಿಂದ ಮಾಡುತ್ತಿದ್ದೇನೆ. ಆದ್ದರಿಂದ ಜಿಲ್ಲಾಪರಿಷತ್ತಿನವರಿಂದ ಶಿಫಾರಸ್ಸು ಬಂದರೆ ಅದನ್ನು ಮಾಡುತ್ತೇನೆ. ತಮಗೆ ಗೊತ್ತಿದೆ ಅಲ್ಲಿ ಕುಡಿಯುವುದಕ್ಕೆ ನೀರು ಇಲ್ಲ, ಅಲ್ಲಿ ಅಧಿಕಾರಿಗಳ ತಂಡವನ್ನು ಕಳುಹಿಸಿ ಕುಡಿಯುವುದಕ್ಕೆ ನೀರು ಹಾಕಿಸಿದ್ದೇನೆ. ನೂರಾರು ಗುಡಿಸಲುಗಳನ್ನು ಹಾಕಿಕೊಂಡಿದ್ದರು. ಒಂದು ಸಂಸ್ಥೆ ಅಲ್ಲಿ ನೂರಾರು ಏಕರೆ ಜಮೀನು ತೆಗೆದುಕೊಳ್ಳಲು ಜಿಲ್ಲಧಿಕಾರಿಯವರಿಂದ ಪ್ರಯತ್ನ ಮಾಡುತ್ತಿದ್ದಾರೆ. ಇದೆಲ್ಲ ತಮಗೆ ಗೊತ್ತಿರತಕ್ಕಂಥ ವಿಚಾರ. ಅದರೆ ಟಿ.ಬಿ. ಡಾರ್ಮಸಿಯಲ್ಲಿ ಟ್ರೀಟ್‌ಮೆಂಟ್ ಆದಮೇಲೆ ಟಿ.ಬಿ. ಆಸ್ಪತ್ರೆಗಳನ್ನು ತೆರೆಯಲು ಕೇಂದ್ರ ಸರ್ಕಾರದಲ್ಲಿ ಅವಕಾಶ ಇಲ್ಲ. ಮನೆಯಲ್ಲಿ ಈ ರೋಗ ವಾಸಿ ಮಾಡತಕ್ಕಂಥ ಸಾಮರ್ಥ್ಯ ಇರುವುದರಿಂದ ಮತ್ತು ಡಾಟ್ಸ್ ಥೆರಪಿ ಬಂದಿರುವುದರಿಂದ ಈಗ ಅಂತಹ ಪರಿಸ್ಥಿತಿ ಇಲ್ಲ. ಜಿಲ್ಲಾಪರಿಷತ್ತಿನಿಂದ ಶಿಫಾರಸ್ಸು ಬಂದರೆ ಸರ್ಕಾರ ಅದನ್ನು ಪರಿಶೀಲನೆ ಮಾಡುತ್ತದೆ.

ಶ್ರೀ ಕುಂಬಳೆ ಸುಂದರ್‌ರಾವ್ : ಅಲ್ಲಿರುವ ಟಿ.ಬಿ. ಆಸ್ಪತ್ರೆಯನ್ನು ನಾನು ತೆಗೆಯಬೇಕು ಎಂದು ಖಂಡಿತವಾಗಿ ಹೇಳುತ್ತಿಲ್ಲ. ಮೊದಲು ಜನ ಆಸ್ಪತ್ರೆ ಹತ್ತಿರ ಹೋಗುತ್ತಿರಲಿಲ್ಲ. ಮನುಷ್ಯರು ಕೂಡ ಟಿ.ಬಿ. ರೋಗಿಗಳ ಹತ್ತಿರ ಹೋಗುತ್ತಿರಲಿಲ್ಲ. ಈಗ ಪರಿಸ್ಥಿತಿ ಬದಲಾಗಿದೆ. ಟಿ.ಬಿ. ರೋಗ ಮಾರಕ ರೋಗ ಅಲ್ಲ ಎಂದು ಭಾವನೆ ಜನರಲ್ಲಿ ಬಂದಿದೆ. ಆದುದರಿಂದ ಈ ನಿಟ್ಟಿನಲ್ಲಿ ಇನ್ನೊಂದು ಆಸ್ಪತ್ರೆಗೆ 250 ಎಕರೆ ಸ್ಥಳ ಇರುವಾಗ ತಾವು ಮನಸ್ಸು ಮಾಡಿದರೆ ಕಷ್ಟ ಇಲ್ಲ. ಆ ಜಿಲ್ಲಾಪರಿಷತ್ತಿನ ಅಪೇಕ್ಷೆ ಏನು ಇದೆ ಅದು ಬರಲಿ ಆದರೆ ನೀವು ಮನಸ್ಸು ಮಾಡಿದರೆ ಅದನ್ನು ಬರೆದು ತರಿಸಲಿಕ್ಕೆ ಬರುತ್ತದೆ. ನೋಡಿ ಈ ರೀತಿ ಆಸ್ಪತ್ರೆಯನ್ನು ಮಾಡುತ್ತಿದ್ದೇವೆ ಒಂದು ಒಪ್ಪಿಗೆ ಕೊಡಿ ಎಂದರೆ ಎಷ್ಟು ಸುಲಭ. ಅವರು ಕೊಡುವುದಕ್ಕಿಂತ ನೀವೇ ಕೇಳಿ ಪಡೆದುಕೊಂಡು ಮಾಡುವುದು ನಿಮ್ಮ ಅಧಿಕಾರದಲ್ಲಿ ಇದೆ.

ಡಾ|| ಹೆಚ್. ಸಿ. ಮಹದೇವಪ್ಪ : ಈ ಆಸ್ಪತ್ರೆಗಳು ಜಿಲ್ಲಾಪರಿಷತ್ತಿನ ಆಡಳಿತ ವ್ಯಾಪ್ತಿಗೆ ಬರುವುದರಿಂದ ಸರ್ಕಾರದವರು ನೇರವಾಗಿ ನಿರ್ಧಾರ ಮಾಡುವುದಕ್ಕೆ ಬರುವುದಿಲ್ಲ. ಆದರೂ ಜನರಿಗೆ ಅನುಕೂಲವಾಗುವಂಥ ಕಾರ್ಯವಿರುವುದರಿಂದ ನಾನು ಕೂಡ ಮಾನ್ಯ ಸದಸ್ಯರ ಇಚ್ಛೆಯಂತೆ ಜಿಲ್ಲಾಪರಿಷತ್ತಿಗೆ ಒಂದು ವರದಿಯನ್ನು ಕೇಳುತ್ತೇನೆ. ಅವರಿಂದ ಶಿಫಾರಸ್ಸು ಬಂದರೆ ಅದನ್ನು ಪರಿಗಣನೆ ಮಾಡುತ್ತೇವೆ.

ಫಾರ್ಮಸಿಸ್ಟ್‌ರಿಗೆ ತರಬೇತಿ

552 - ಶ್ರೀ ಹೆಚ್. ಎಸ್. ಶಂಕರಲಿಂಗೇಗೌಡ (ಚಾಮರಾಜ) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಔಷಧ ವಿತರಕರುಗಳ ಹುದ್ದೆಗೆ ತರಬೇತಿ ನೀಡುವ ಕಾರ್ಯಕ್ರಮವು ಭಾರತೀಯ ವೈದ್ಯ ಪದ್ಧತಿ ಇಲಾಖೆಯಲ್ಲಿ ಈ ಹಿಂದೆ ನಡೆಸಲಾಗುತ್ತಿದೆ?

ಆ) ಹಾಗಿದ್ದಲ್ಲಿ ಈ ಕಾರ್ಯಕ್ರಮವನ್ನು ನಿಲ್ಲಿಸಿರಲು ಕಾರಣವೇನು?

ಡಾ|| ಹೆಚ್. ಸಿ. ಮಹದೇವಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) :

ಅ) ಹೌದು.

ಆ) ಸರ್ಕಾರಿ ಆದೇಶ ಸಂಖ್ಯೆ : ಹೆಚ್ಎಫ್ಡಬ್ಲ್ಯೂ:451:ಪಿಐಎಂ:85, ದಿನಾಂಕ : 10-3-87ರನ್ವಯ ಭಾರತೀಯ ವೈದ್ಯ ಪದ್ಧತಿಗಳು ಮತ್ತು ಹೋಮಿಯೋಪತಿ ಇಲಾಖೆಯಲ್ಲಿ ಆಯುರ್ವೇದ:ಯುನಾನಿ ಪದ್ಧತಿಯಲ್ಲಿ ಎಸ್.ಎಸ್.ಎಲ್.ಸಿ. ತೇರ್ಗಡೆ ಹೊಂದಿದವರಿಗೆ 10 ತಿಂಗಳ ಫಾರ್ಮಸಿಸ್ಟ್ ತರಬೇತಿಯನ್ನು ನಡೆಸಲಾಗುತ್ತಿತ್ತು. ತದನಂತರ ಫಾರ್ಮಾಸಿಸ್ಟ್ ಸಂಘದವರ ಬೇಡಿಕೆಯನುಸಾರ, 10+2 ವಿದ್ಯಾರ್ಹತೆ ಹೊಂದಿರುವ ವಿದ್ಯಾರ್ಥಿಗಳಿಗೆ ಒಂದು ವರ್ಷದ ಫಾರ್ಮಾಸಿ ತರಬೇತಿಯನ್ನು ನಡೆಸುವಂತೆ ಸರ್ಕಾರಕ್ಕೆ ಪ್ರಸ್ತಾವನೆ ಕಳುಹಿಸಲಾಗಿತ್ತು.

ತದನಂತರ ಸರ್ಕಾರದ ಪತ್ರದ ಸಂಖ್ಯೆ : ಹೆಚ್ಎಫ್ಡಬ್ಲ್ಯೂ 242 : ಪಿಐಎಂ:94, ದಿನಾಂಕ: 21-3-95ರನ್ವಯ 10+2 ವಿದ್ಯಾರ್ಹತೆಗಿಂತ ಕಡಿಮೆ ವಿದ್ಯಾರ್ಹತೆ, ಹೊಂದಿರದ ಅಭ್ಯರ್ಥಿಗಳಿಗೆ 1 ವರ್ಷದ ಫಾರ್ಮಸಿಸ್ಟ್ ತರಬೇತಿಯನ್ನು ನಡೆಸುವಂತೆ ತಿಳಿಸಿರುವುದರಿಂದ ಹಾಗೂ ಈ ವಿಷಯಕ್ಕೆ ಸಂಬಂಧಿಸಿದಂತೆ ಪಠ್ಯ ಕ್ರಮಗಳನ್ನು ಪರಿಷ್ಕರಣೆ ನಡೆಸಲಾಗುತ್ತಿದ್ದು, ನಂತರ ಫಾರ್ಮಸಿಸ್ಟ್ ತರಬೇತಿಯ ಕಾರ್ಯಕ್ರಮವನ್ನು ಪ್ರಾರಂಭಿಸಲಾಗುವುದು.

ಶ್ರೀ ಹೆಚ್. ಎಸ್. ಶಂಕರಲಿಂಗೇಗೌಡ : ಮಾನ್ಯ ಅಧ್ಯಕ್ಷರೆ, ಉತ್ತರ ಬಂದಿದೆ, ಸಮರ್ಪಕವಾಗಿದೆ ಎಂದು ಕಾಣುತ್ತದೆ. ಆ ಆಯುರ್ವೇದ ಪದ್ಧತಿ ರಾಷ್ಟ್ರ ಮತ್ತು ಅಂತರಾಷ್ಟ್ರೀಯ ಮಟ್ಟದಲ್ಲಿ ಉತ್ತಮವಾದುದು. ಈ ಆಯುರ್ವೇದ ಔಷಧಿ ವಿತರಕರುಗಳಿಗೆ ತರಬೇತಿ ಕೊಡಬೇಕು ಎಂದು ಇತ್ತು. ಅದನ್ನು ಅವರ ಬೇಡಿಕೆಯ ಮೇಲೆ ಹಿಂತೆಗೆದುಕೊಂಡಿದ್ದಾರೆ ಎಂದು ಉತ್ತರದಲ್ಲಿ ಹೇಳಿದ್ದಾರೆ. ಆ ತರಬೇತಿ ನಿಂತು ಹೋಗಿದೆ. ಈಗ ಅದನ್ನು ಮಾಡಲಿಕ್ಕೆ ಪ್ರಯತ್ನ ಮಾಡುತ್ತೇವೆ ಎಂದು ಹೇಳುತ್ತಿದ್ದಾರೆ. ಹಿಂದಿನ ಕಾಲದಲ್ಲಿ ಆಯುರ್ವೇದವನ್ನು ತಂದೆ, ಮಗ, ಮೊಮ್ಮಗ ಮಾಡಿಕೊಂಡು ಹೋಗುತ್ತಿದ್ದರು. ಬಹಳ ಗುಪ್ತವಾಗಿ ಆಯುರ್ವೇದ ಇತ್ತು. ಈಗ ಮತ್ತೆ ಜನ ಅಲೋಪಥಿಯಿಂದ ಆಯುರ್ವೇದಕ್ಕೆ ಒಲಿಯುತ್ತಿದ್ದಾರೆ. ಆದ್ದರಿಂದ ಈ ಔಷಧ ವಿತರಕರುಗಳಿಗೆ ತರಬೇತಿ ಕೊಟ್ಟು ಆಯುರ್ವೇದವನ್ನು ಬೆಂಬಲಿಸಬೇಕೆಂದು ವಿನಂತಿಸುತ್ತೇನೆ.

ಅಧ್ಯಕ್ಷರು : ಬಲಪಡಿಸುವ ಎಲ್ಲಾ ಪ್ರಯತ್ನಗಳನ್ನು ಮಾಡಬೇಕು.

ಡಾ|| ಹೆಚ್. ಸಿ. ಮಹಾದೇವಪ್ಪ : ಮಾನ್ಯ ಸದಸ್ಯರಿಗೆ ಅಭಿನಂದನೆಯನ್ನು ತಿಳಿಸಬಯಸುತ್ತೇನೆ.

ಶ್ರೀ ಇ. ಮಾರುತಿರಾವ್ ಪವಾರ್ : ಇದರಲ್ಲಿ ಒಂದು ವಿಚಾರವನ್ನು ತಿಳಿಸಿದ್ದಾರೆ 1995ರನ್ವಯ ಪಠ್ಯಕ್ರಮಗಳನ್ನು ಪರಿಷ್ಕರಣೆ ಕೊಡಿ ನಾವು ತರಬೇತಿಯನ್ನು ಕೊಡುತ್ತೇವೆ ಎಂದು ಹೇಳಿದ್ದಾರೆ. ಅಂದರೆ ಪಠ್ಯಪುಸ್ತಕ ಪರಿಷ್ಕರಣೆಗೆ ಎರಡು ವರ್ಷ ಬೇಕಾ? ಏತಕ್ಕೆ ಎರಡು ವರ್ಷ ಬೇಕು? ಆದರೆ ಮಾಡಲಾಗುವುದು ಎಂದು ಹೇಳಿದ್ದಾರೆ. ತಕ್ಷಣದಲ್ಲಿ ಆ ತರಬೇತಿಯನ್ನು ಏಕೆ ಮಾಡಲು ಆಗುವುದಿಲ್ಲ? ನಿಗದಿತವಾಗಿ ಪರಿಷ್ಕರಣೆ ಮಾಡಿ ತಕ್ಷಣ ಮಾಡುತ್ತೇವೆ ಎಂದು ಏಕೆ ಉತ್ತರ ಕೊಡಲಿಲ್ಲ ಎಂದು ಕೇಳುತ್ತೇನೆ.

ಡಾ|| ಹೆಚ್. ಸಿ. ಮಹಾದೇವಪ್ಪ : ಮಾನ್ಯ ಸಭಾಧ್ಯಕ್ಷರೆ, ಹಿಂದೆ ಎಸ್.ಎಸ್.ಎಲ್.ಸಿ ಪಾಸ್ ಆದಮೇಲೆ ಹತ್ತು ತಿಂಗಳ ಫಾರ್ಮಾಸಿಸ್ಟ್ ತರಬೇತಿಯನ್ನು ಕೊಟ್ಟು ಉದ್ಯೋಗ ಕೊಡತಕ್ಕಂಥ ಕೆಲಸ ಇಂಡಿಯನ್ ಸಿಸ್ಟಮ್ ಆಫ್ ಮೆಡಿಸಿನ್‌ನಲ್ಲಿ ನಡೆಯುತ್ತಿತ್ತು. ಅದು ಆದಮೇಲೆ ಇಂಡಿಯನ್ ಇನ್ಸ್‌ಟಿಟ್ಯೂಟ್ ಆಫ್ ಕೌನ್ಸಿಲ್‌ನಲ್ಲಿ 10+2 ಅಂದರೆ ಪಿ.ಯು.ಸಿ. ಓದಿದವರಿಗೆ ಈ ತರಬೇತಿ ಕೊಡಬೇಕು ಎಂದು ಬಂದಾಗ ಅಲ್ಲಿ ಕೆಲಸ ಮಾಡತಕ್ಕಂಥ ನೌಕರರು ವೇತನದ ತಾರತಮ್ಯ ಆಗುತ್ತದೆ. ಆದ್ದರಿಂದ ಇದನ್ನು ಪುನರ್ ಪರಿಶೀಲನೆ ಮಾಡಬೇಕು ಎಂದು ಹೇಳಿದಮೇಲೆ ತಾತ್ಕಾಲಿಕವಾಗಿ ಸ್ಥಗಿತಗೊಳಿಸಲಾಗಿದೆ. ಪಠ್ಯಪುಸ್ತಕ ಪರಿಷ್ಕರಣ ಮಾಡತಕ್ಕಂಥವರು ಸೆಂಟ್ರಲ್ ಕೌನ್ಸಿಲ್ ಆಫ್ ಇಂಡಿಯಾದವರು ಆಯುರ್ವೇದಿಕ್ ಕೌನ್ಸಿಲ್‌ನವರು ಇದು ರಾಜ್ಯ ಸರ್ಕಾರದ ವ್ಯಾಪ್ತಿಯಲ್ಲಿ ಬರುವುದಿಲ್ಲ. ಅವರು ಯಾವಾಗ ಮಾಡುತ್ತಾರೆ ನಮಗೆ ಗೊತ್ತಿಲ್ಲ. ಆದರೂ ಕೂಡ ನಮ್ಮ ರಾಜ್ಯ ಸರ್ಕಾರ ಈ ರೀತಿ ತೊಂದರೆಯಾಗದ ರೀತಿಯಲ್ಲಿ ಪಕ್ಕದ ರಾಜ್ಯಗಳಲ್ಲಿ ಆಂಧ್ರ ಮತ್ತು ಇತರ ರಾಜ್ಯಗಳಲ್ಲಿ ಈ ಒಂದು ತರಬೇತಿ ನಡೆಯುತ್ತಿದೆ ಅದನ್ನು ನೋಡಿ ಪರಿಶೀಲನೆ ಮಾಡುತ್ತಿದ್ದೇವೆ. ಇನ್ನು ಮೂರು ನಾಲ್ಕು ತಿಂಗಳಲ್ಲಿ ಅವರಿಗೆ ತರಬೇತಿ ಕೊಡತಕ್ಕಂಥ ಕೆಲಸವನ್ನು ಪ್ರಾರಂಭ ಮಾಡುತ್ತೇವೆ. ಪಠ್ಯಪುಸ್ತಕ ಯಾವಾಗಲಾದರೂ ಬರಲಿ. ಆದರೆ ತರಬೇತಿ ಕೊಡಲಿಕ್ಕೆ ನಾವು ಪ್ರಯತ್ನ ಮಾಡುತ್ತಿದ್ದೇವೆ. ಮತ್ತು ರಾಜ್ಯ ಸರ್ಕಾರದ ವ್ಯಾಪ್ತಿನಲ್ಲಿ ಸಿಲೆಬಸ್ ಮಾಡಲಿಕ್ಕೆ ಹೇಳಿದ್ದೇವೆ ಅದನ್ನು ಇನ್ನು ಎರಡು ಮೂರು ತಿಂಗಳಲ್ಲಿ ಪ್ರಾರಂಭ ಮಾಡಲಿಕ್ಕೆ ನಾನು ಕ್ರಮ ಕೈಗೊಳ್ಳುತ್ತೇನೆ.

ಬಾದಾಮಿ ತಾಲ್ಲೂಕಿನಲ್ಲಿ ಪ್ರೌಢಶಾಲೆಗಳಲ್ಲಿ ಶಿಕ್ಷಕರ ಮತ್ತು ಕಟ್ಟಡದ ಕೊರತೆ

553 - ಶ್ರೀ ಬಿ. ಬಿ. ಚಿಮ್ಮನಕಟ್ಟಿ (ಬಾದಾಮಿ) : ಮಾನ್ಯ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬಾದಾಮಿ ತಾಲ್ಲೂಕಿನಲ್ಲಿರುವ ಒಟ್ಟು ಸರ್ಕಾರಿ ಪ್ರೌಢಶಾಲೆಗಳೆಷ್ಟು?

ಆ) ಯಾವ ಪ್ರೌಢಶಾಲೆಗಳಲ್ಲಿ ಕಟ್ಟಡ ಹಾಗೂ ಶಿಕ್ಷಕರ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆ?

ಇ) ಹಾಗಿದ್ದಲ್ಲಿ ಈ ವರ್ಷ ಶೀಘ್ರದಲ್ಲಿಯೇ ಹುದ್ದೆಗಳ ಮಂಜೂರಾತಿ ಹಾಗೂ ಶಿಕ್ಷಕರನ್ನು ನಿಯೋಜಿಸಲು ಸರ್ಕಾರವು ಕ್ರಮ ಕೈಗೊಳ್ಳಲಾಗುತ್ತದೆಯೇ?

ಶ್ರೀ ಹೆಚ್. ಜಿ. ಗೋವಿಂದೇಗೌಡ (ಪ್ರಾಥಮಿಕ ಹಾಗೂ ಪ್ರಾಢ ಶಿಕ್ಷಣ ಸಚಿವರು)

ಅ) 07.

ಆ) ಬಾದಾಮಿ ತಾ: ಗುಳೇದಗುಡ್ಡದಲ್ಲಿರುವ ಸರ್ಕಾರಿ ಜೂನಿಯರ್ ಕಾಲೇಜು ಬಾಲಕರ ಮತ್ತು ಬಾಲಕಿಯರ ಇವುಗಳಲ್ಲಿ ಕೊಠಡಿಗಳ ಕೊರತೆ ಇರುವುದು ಗಮನಕ್ಕೆ ಬಂದಿದೆ ಸದರಿ ಸರ್ಕಾರಿ ಪ್ರೌಢಶಾಲೆಗಳಲ್ಲಿ ಶಿಕ್ಷಕರ ಕೊರತೆ ಇರುವುದಿಲ್ಲ.

ಇ) ಪ್ರಶ್ನೆ ಉದ್ಭವಿಸುವುದಿಲ್ಲ.